# ಗೋ ವಿಶ್ವ

Cow Universe

गौ विश्व

ಸರ್ವಧಾರಿ ಸಂವತ್ಸರ | ಆಷಾಢ | ಜುಲೈ ೨೦೦೮ | ಸಂಪುಟ–೨ | ಸಂಚಿಕೆ–೭


ಗುರುವಾಣಿ

## ಸ್ವಾವಲಂಬಿತ ಸಮಗ್ರ ಗ್ರಾಮೀಣಾಭಿವೃದ್ಧಿಗೆ ಬೇಕು ಜ್ಞಾನ ಸಂತತಿ



### ಹೂರಣ


**ಗುರುವಾಣಿ**

**ಪ್ರಶ್ನೋತ್ತರ**

**ಚಿಕೂನ್ ಗುನ್ಯ ವಿರುದ್ಧ ಸಮರಕ್ಕೆ ಗೋವು**

**ಮಾಸದ ಗೋವು: ಒಂಗೋಲ್**

**ಗೋವು ಮತ್ತು ಕೃಷಿ**



ಪ್ರಕಾಶನ: IT4COW ಸಂಘಟನೆ

groups.yahoo.com/group/IT4COW

ಅಂತರಜಾಲ ತಾಣ: vishwagou.org

ಸಂಪರ್ಕ: govishva@gmail.com




ಸ್ವಾವಲಂಬನೆ, ಗ್ರಾಮೀಣಾಭಿವೃದ್ಧಿ ಎನ್ನುವಾಗ ಥಕ್ಕನೆ ನೆನಪಾಗುವುದು ಗಾಂಧೀಜಿ ಮತ್ತು ಅವರ ಗ್ರಾಮರಾಜ್ಯದ ಮಾದರಿ. ಹೊಸಹೊಸ ಆವಿಷ್ಕಾರಗಳು ಬಲವಾದ ಹೊಡೆತ ಕೊಟ್ಟ ಸಂದರ್ಭದಲ್ಲಿ ಹಳೆಯದನ್ನು ಅಪ್ಪಿಕೊಳ್ಳುವ ಯೋಚನೆ ಬರುತ್ತದೆ. ಆಗ ಮತ್ತೆ ಎದುರಿಗೆ ಬಂದು ನಿಲ್ಲುವುದು ಗಾಂಧೀ ಮಹಾತ್ಮ.

ಹಾಗೆ ಮತ್ತೆ ಮತ್ತೆ ನೆನೆಯುವ ಸನ್ನಿವೇಶಗಳು, ಸಂಕಟಗಳು ಒಂದಾದ ಮೇಲೆ ಒಂದರಂತೆ ಎದುರಾಗುತ್ತಿವೆ. ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ರಸಗೊಬ್ಬರದ ತೀವ್ರ ಕೊರತೆಯುಂಟಾಯಿತು. ಅದನ್ನು ಪ್ರತಿಭಟಿಸುವ ಹೋರಾಟ ಹಿಂಸಾತ್ಮಕ ರೂಪವನ್ನು ಪಡೆಯಿತು. ಅಬ್ಬ! ಮುಗಿಯಿತು ಅಂದುಕೊಳ್ಳುವಷ್ಟರಲ್ಲಿ ಪೆಟ್ರೋಲಿಯಮ್ ಪದಾರ್ಥಗಳ ಬೆಲೆ ಗಗನಕ್ಕೇರಿತು. ಅಷ್ಟೇ ಸಾಲದೆಂಬಂತೆ ತೀವ್ರತರ ಕೊರತೆ ಕಂಡುಬರುತ್ತಿದೆ.

ಆ ಪೆಟ್ಟಿನಿಂದ ಚೇತರಿಸಿಕೊಳ್ಳುವ ಮುನ್ನವೇ ಚಿಕೂನ್‌ಗುನ್ಯಾ ಉಲ್ಬಣಿಸಿತು. ಅದು ಹದ್ದುಬಸ್ತಿಗೆ ಬಂತು ಅಂದುಕೊಳ್ಳುವಷ್ಟರಲ್ಲಿ ಮಳೆ ಕೈಕೊಡಲು ಪ್ರಾರಂಭಿಸಿತು. ಈಗ ನೀರಿನ ಅಭಾವ, ವಿದ್ಯುತ್ ಕೊರತೆಯ ಸಂಕಟವನ್ನು ಎದುರಿಸುತ್ತಿದ್ದೇವೆ.

ಇಷ್ಟೆಲ್ಲವುಗಳ ತೀವ್ರ ಹೊಡೆತ ಬೀಳುತ್ತಿರುವುದು ಸಾಮಾನ್ಯರ ಮೇಲೆ. ಅದರಲ್ಲೂ ರೈತಾಪಿವರ್ಗದ ಮೇಲೆ. ಒಂದಂಶ ಚಿಂತನೆಗೆ ಹಚ್ಚುತ್ತದೆ. ಸಮಸ್ಯೆಗಳು ಸ್ವಾಭಾವಿಕ. ಆದರೆ, ಇವುಗಳ ಸ್ವರೂಪ ಭಿನ್ನವಾಗಿರುವುದೇ ಚಿಂತೆಗೆ ಕಾರಣವಾಗಿದೆ.

ಯಾವುದನ್ನೂ ಪ್ರಾದೇಶಿಕವಾಗಿ ಅವಲಂಬಿಸುವಂತಿಲ್ಲ. ಬೀಜ, ಗೊಬ್ಬರ, ಕೀಟನಾಶಕ, ಕೃಷಿಯಂತ್ರ, ನೀರು, ವಿದ್ಯುತ್ ಹೊರಗಿನಿಂದ ತರಿಸಿಕೊಳ್ಳುವುದು ಅನಿವಾರ್ಯವಾಗಿದೆ. ಅಷ್ಟು ಸಾಲದೆಂಬಂತೆ ಕಾರ್ಮಿಕರೂ ಹೊರಗಿನಿಂದ ಬರಬೇಕು. ಪರಿಸ್ಥಿತಿ ಹೀಗಿರುವುದರಿಂದ ಕೃಷಿ ಕೆಲಸ ರಿಸ್ಕಿ ಎಂಬ ಭಾವನೆ ಬಲಿಯುತ್ತಿದೆ. ಆ ಕಾರಣದಿಂದ ರೈತರು ತಮ್ಮ ಭೂಮಿಯನ್ನು ದೊಡ್ಡ ದೊಡ್ಡ ಕಂಪನಿಗಳಿಗೆ ಗುತ್ತಿಗೆ ಆಧಾರದ ಮೇಲೆ ಕೃಷಿ ಕೈಂಕರ್ಯಕ್ಕೆ ಬಿಡುತ್ತಿದ್ದಾರೆ. ಅವರ ನೆಲದಲ್ಲಿಯೇ ಪರಿಚಯವೇ ಇಲ್ಲದ ಪ್ರಭುವಿನ ಕೆಳಗೆ ಜೀತದಾಳಾಗಿ ದುಡಿಯುವಂತಾಗಿದೆ. ಇಷ್ಟಾಗಿರುವಾಗ ಸಿಟ್ಟಿನಿಂದ ಸಿಡಿಮಿಡಿಗೊಳ್ಳುವುದನ್ನು ಬಿಟ್ಟು ಮತ್ತೇನೇನೂ ಮಾಡಲಾಗುತ್ತಿಲ್ಲ ಎಂಬುದೇ ಚಿಂತೆ.

ಕೆಲವಾರು ದಶಕಗಳಷ್ಟು ಹಿಂದಕ್ಕೆ ಹೊರಳಿ ನೋಡಿದರೆ ಪರಿಸ್ಥಿತಿ ಉತ್ತಮವಾಗಿತ್ತು. ಭಾರತವು ಬ್ರಿಟೀಷರ ಆಳ್ವಿಕೆಯಲ್ಲಿ ನಲುಗುತ್ತಿದ್ದಾಗ್ಯೂ ಗ್ರಾಮೀಣ ಜೀವನ ಸಹ್ಯವಾಗಿತ್ತು. ಜನ ತಮ್ಮ ಅನ್ನವನ್ನು ತಾವೇ ದುಡಿದು–

ಕೊಳ್ಳುತ್ತಿದ್ದರು. ಎಲ್ಲಿಂದಲೋ ಬರುತ್ತೆ ಅಂತ ಬೀಜ, ಗೊಬ್ಬರ ಮೊದಲಾದ ಸಾಮಗ್ರಿಗಳಿಗೆ ಕಾದು ಕುಳಿತುಕೊಳ್ಳುತ್ತಿರಲಿಲ್ಲ. ತಮ್ಮ ನೆಲದ್ದೇ ಬೀಜ ಬಿತ್ತುತ್ತಿದ್ದರು. ಮನೆಮಂದಿಯೇ ಹೊಲಗದ್ದೆಗಳಲ್ಲಿ ದುಡಿಯುತ್ತಿತ್ತು. ಎತ್ತು, ನೇಗಿಲುಗಳೇ ಉಳುವ ಯಂತ್ರಗಳಾಗಿದ್ದವು. ಗೊಬ್ಬರಕ್ಕೆ ಕಂಡವರ ಮುಂದೆ ಭಿಕ್ಷೆ ಬೇಡುವ ಪರಿಸ್ಥಿತಿ ಇರಲಿಲ್ಲ. ಹಟ್ಟಿ ಗೊಬ್ಬರವೇ ಸಾಕಷ್ಟಿತ್ತು. ಒಟ್ಟಿನಲ್ಲಿ ಸ್ವಸ್ಥ ಜೀವನ ನಡೆಸಲು ಏನೂ ತೊಂದರೆ ಇರಲಿಲ್ಲ.

ಈಗ ಹಾಗಿಲ್ಲ. ಒಂದು ಕೇಂದ್ರೀಕೃತ ವ್ಯವಸ್ಥೆಗೆ ಒಡ್ಡಿಕೊಳ್ಳುವ ಧಾವಂತ ಹೆಚ್ಚಾಗುತ್ತಿದೆ. ಅದರಂತೆ ಏನೇ ಆಗುವುದಿದ್ದರೂ ಅದೆಲ್ಲಿಂದಲೋ ಆಗಬೇಕು. ಆಗಿಯೇ ತೀರುತ್ತದೆಂಬ ವಿಶ್ವಾಸವಿಲ್ಲ. ಆದರೂ ಏನೋ ಒಂದು ಹೋಪ್. ಭಂಡ ಧೈರ್ಯ ಎನ್ನುತ್ತಾರಲ್ಲ. ಹಾಗೇ ಇದು.

ಶುರುವಾಗಿದ್ದು ಹೀಗೆ. ಕೆಲಸದ ಅವಧಿ, ಸಂತಸದ ಕ್ಷಣ ಎರಡೂ ಬೇರೆ ಬೇರೆ. ಸಂತೋಷ ಅನುಭವಿಸಬೇಕಾದರೆ ಕೆಲಸದಿಂದ ಮುಕ್ತಿ ಬೇಕು. ವೀಕ್‌ಡೇಗೊಂದು ವೀಕ್ ಎಂಡೊಂದು ಬೇಕೇಬೇಕು. ಹಾಗಾಗಬೇಕಿದ್ದರೆ ಡಿವಿಜನ್ ಆಫ್ ಲೇಬರ್ ಚಾಲ್ತಿಗೆ ಬರಬೇಕಿತ್ತು, ಬಂತು. ವೀಕ್ ಎಂಡಿನ ಮೋಜಿಗೆ ವೀಕ್‌ಡೇಯ ಅದೇ ನಿರ್ದಿಷ್ಟ ಅವಧಿಯಲ್ಲಿ ಹೆಚ್ಚು ಸಂಪಾದಿಸುವ ಹಪಹಪಿ ಹೆಚ್ಚಾಯಿತು.

ಅಲ್ಲಿಂದ ಮುಂದೆ ಒಂದೆಡೆಯಲ್ಲಿ ಸಮಗ್ರ ಸ್ವರೂಪದೊಂದಿಗೆ ನಡೆಯುತ್ತಿದ್ದ ಕೃಷಿ ಚಟುವಟಿಕೆ ತನ್ನ ಸಮಗ್ರತೆಯನ್ನು ಕಳೆದುಕೊಳ್ಳಲು ಪ್ರಾರಂಭಿಸಿತು. ಬೀಜ, ಗೊಬ್ಬರ, ಕೀಟನಾಶಕ, ಕೃಷಿಯಂತ್ರ ಹೀಗೆ ಒಂದೊಂದನ್ನೂ ಪ್ರಪ್ರತ್ಯೇಕ ಸ್ಥಳದಿಂದ ತರಿಸಿಕೊಳ್ಳುವ ಅನಿವಾರ್ಯತೆ ಎದುರಾಯಿತು. ಸಂಪತ್ತನ್ನು ಬಳಸಿಕೊಳ್ಳುವ ಬದಲು ಹೀರಲು ಅಡಿಯಿಟ್ಟಾಯಿತು. ಈಗದು ಕಡ ತೀರಿಸಿಕೊಳ್ಳುತ್ತಿದೆ ಅಷ್ಟೆ.

ಇದಕ್ಕೆ ತೋರುವ ಪರಿಹಾರ ಒಂದೇ. ನಮ್ಮ ಸನಾತನ ಜೀವನ ಚಿಂತನೆಯ ಮೊರೆ ಹೋಗುವುದು. ಅದು ಸಾರುತ್ತದೆ. ಕಾಲಧರ್ಮವನ್ನು ಅನುಸರಿಸಿ ಕೆಲಸಕಾರ್ಯಗಳನ್ನು ಕೈಗೊಳ್ಳಬೇಕು. ಮಾಡುವ ಕಾರ್ಯದಲ್ಲಿಯೇ ಸಂತೋಷ ಕಂಡುಕೊಳ್ಳಬೇಕು, ಅದು ಆಗುತ್ತದೆ ಕೂಡ. ಕೆಲಸದಲ್ಲಿ ಹೊಂದುವ ಬದಲಾವಣೆಯೇ (ಕಾರ್ಯಾಂತರ) ವಿಶ್ರಾಂತಿ. ಎಲ್ಲಿ ಸಂಪತ್ತು ಕೈಜಾರಿ ಹೋಗುತ್ತದೋ ಎಂದು ಹೆದರುವುದು ಬೇಡ. ಪರಿಶ್ರಮಿಗಳಿಗೆ ಅದು ತಾನೇತಾನಾಗಿ ಒದಗಿಬರುತ್ತದೆ. ಸದಾ ಸತ್ಕಾರ್ಯದಲ್ಲಿ ಸಕ್ರಿವಾಗಿರುವುದೊಂದೇ ನಮ್ಮಗಳ ಜವಾಬ್ದಾರಿ. ಈ ಚಿಂತನೆ ವ್ಯಾಪಕಗೊಂಡಿದ್ದೇ ಆದರೆ ಅಭಿವೃದ್ಧಿ ನಿಶ್ಚಿತ. ಗ್ರಾಮ–ಗ್ರಾಮವೂ ಸ್ವಾವಲಂಬಿಯಾಗುವುದು ಖಚಿತ.

ನಮ್ಮ ಉಪಾಧ್ಯಾಯರ ಒಂದು ಮಾತು ನೆನಪಾಗುತ್ತದೆ. "ಕೇವಲ ಸಂತತಿ ಬೆಳೆದರೆ ಸಾಲದು. ಜ್ಞಾನ ಸಂತತಿ ಬೆಳೆಯಬೇಕು". ನಮಗೆ ಬೇಕಾಗಿರುವುದೂ ಅದೇ ಅಲ್ಲವೇ?

ವಂದೇ ಗೋ ಮಾತರಮ್

**– ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

**ಶ್ರೀ ರಾಮಚಂದ್ರಾಪುರ ಮಠ**

# ಪ್ರಶ್ನೋತ್ತರ

ಪ್ರ: ಗೋ ಮಾಂಸ ಉದ್ಯಮದಿಂದ ಮಳೆ ಕಾಡು ನಾಶವಾಗುತ್ತಿವೆಯೇ ?

ಉ: ಖಂಡಿತಾ ಹೌದು. ಅಮೆರಿಕದ ಗೋಮಾಂಸ ಉದ್ದಿಮೆದಾರರು ಈಗ ಬ್ರೆಜಿಲ್ ದೇಶದ ವಿಸ್ತಾರವಾದ ಅಮೆಜಾನ್ ಮಳೆ ಕಾಡುಗಳಿಗೆ ಲಗ್ಗೆ ಹಾಕಿದ್ದಾರೆ. ನೈಸರ್ಗಿಕ ಮಳೆ ಕಾಡುಗಳಿಗೆ ಜಗತ್ತಿನ ಶ್ವಾಸಕೋಶ ಎನ್ನುತ್ತಾರೆ. ಜಗತ್ತಿನ ಒಟ್ಟು ಆಮ್ಲಜನಕದ ಶೇ ೨೦ ಭಾಗ ಇಲ್ಲಿನ ವೃಕ್ಷಗಳಿಂದಲೇ ಉತ್ಪಾದನೆಯಾಗುತ್ತದೆ. ಅಮೆರಿಕದ ಬೃಹತ್ ದನ ಸಾಕಾಣೆಗೆ ಕೇಂದ್ರಗಳನ್ನು ಸ್ಥಾಪಿಸುತ್ತಿವೆ. ಇವುಗಳ ಮಾಂಸದ ರಫ್ತಿನಿಂದ ಅಮೆರಿಕನ್ನರ ಗೋಮಾಂಸದ ಚಪಲ ಪೂರೈಸುತ್ತಿದೆ. ಕಂಪೆನಿಗಳಿಗೂ ರಾಶಿ ರಾಶಿ ದುಡ್ಡು. ಅರಣ್ಯಕ್ಕೆ ಅರಣ್ಯ ರೋದನವೇ ಗತಿ.

ಪ್ರ: ಗೋ ಮಾಂಸ ಉದ್ಯಮದಿಂದ ಮೇಲ್ಮಣ್ಣು ನಾಶವಾಗುತ್ತಿದೆಯೆ ?

ಉ: ಖಂಡಿತಾ ಹೌದು. ಪ್ರಪಂಚದ ವಾರ್ಷಿಕ ಮಳೆಕಾಡುಗಳ ನಾಶದಲ್ಲಿ ಅರ್ಧದಷ್ಟಕ್ಕೆ ಕಾರಣ ಗೋಮಾಂಸ ಉದ್ಯಮ. ಅಮೆರಿಕದ ಪಶ್ಚಿಮ ಭಾಗದಲ್ಲಿ ಶೇ. ೪೦ ಭೂಮಿಯನ್ನು ಗೋಮಾಂಸಕ್ಕಾಗಿ ಧಾನ್ಯ ಬೆಳೆಯಲು ಬಳಸಲಾಗುತ್ತಿದೆ. ಅತಿಯಾದ ಮೇಯುವಿಕೆ ಹಾಗೂ ಮೇವು ಧಾನ್ಯದ ಸಾಂದ್ರ ಬೇಸಾಯದ ಪರಿಣಾಮವಾಗಿ ಅಮೆರಿಕದಲ್ಲಿ ವಿಪರೀತ ಮೇಲ್ಮಣ್ಣು ನಾಶವಾಗುತ್ತಿದೆ. ವರ್ಲ್ಡ್‌ವಾಚ್ ಸಂಸ್ಥೆಯ ಪ್ರಕಾರ ೨/೩ ಭಾಗ ಮೇಲ್ಮಣ್ಣು ಈಗಾಗಲೇ ನಾಶವಾಗಿದೆ. ೧ ಪೌಂಡು ಗೋಮಾಂಸ ಉತ್ಪಾದನೆ ೩೫ ಪೌಂಡು ಮೇಲ್ಮಣ್ಣು ನಾಶಕ್ಕೆ ಕಾರಣವಾಗುತ್ತಿದೆ.

**– ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

# ಚಿಕೂನ್ ಗುನ್ಯ ವಿರುದ್ಧ ಸಮರಕ್ಕೆ ಗೋವು

ಖ್ಯಾತ ಸಣ್ಣ ಕತೆಗಾರ ಎಂ. ವ್ಯಾಸ ಅವರನ್ನೂ ಸೇರಿಸಿಕೊಂಡು ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಚಿಕೂನ್ ಗುನ್ಯ ರೋಗವು ೭೨ ಜನರನ್ನು ಬಲಿ ತೆಗೆದುಕೊಂಡಿದೆ. ನಾಲ್ಕು ಲಕ್ಷಕ್ಕೂ ಹೆಚ್ಚು ಜನ ಭಯಂಕರ ಜ್ವರ, ಗಂಟುನೋವು, ಬಾವು, ವಾಂತಿ ಮತ್ತಿತರ ಸಮಸ್ಯೆಗಳಿಗೆ ತುತ್ತಾಗಿ ನರಳುತ್ತಿದ್ದಾರೆ. ಈಗ ಶ್ರೀ ರಾಮಚಂದ್ರಾಪುರ ಮಠವು ಚಿಕೂನ್ ಗುನ್ಯ ಪೀಡಿತರಿಗಾಗಿ ವೈದ್ಯಕೀಯ ನೆರವಿನ ಶಿಬಿರಗಳನ್ನು ಸಂಘಟಿಸುತ್ತಿದೆ. ಈ ಶಿಬಿರಗಳಲ್ಲಿ ಆಯುರ್ವೇದ ಮತ್ತು ಗೋಮೂತ್ರ ಆಧಾರಿತ ಚಿಕಿತ್ಸೆ ನೀಡಲಾಗುತ್ತಿದೆ. ಚಿಕೂನ್ ಗುನ್ಯ ರೋಗದಿಂದ ತತ್ತರಿಸುವ ರೋಗಿಗಳ ನೆರವಿಗಾಗಿ ದೇಣಿಗೆ ನೀಡಲು ಮುಂದೆ ಬರುವಂತೆ ಶ್ರೀ ರಾಮಚಂದ್ರಾಪುರ ಮಠವು ಮನವಿ ಮಾಡುತ್ತಿದೆ.

ಹೌದು. ಅದು ಇನ್ನೂ ಒಂದು ಬಲಿಯನ್ನು ಪಡೆದೇ ಬಿಟ್ಟಿತು. ಈ ಸಲ ಅದು ಬಲಿ ತೆಗೆದುಕೊಂಡದ್ದು ಕನ್ನಡದ ಖ್ಯಾತ ಸಣ್ಣ ಕಥೆಗಾರ ಎಂ. ವ್ಯಾಸ ಅವರನ್ನು. ವ್ಯಾಸ ಅವರು ೨೦೦೮ರ ಜುಲೈ ೨೩ರಂದು ಕಾಸರಗೋಡಿನಲ್ಲಿ ಮೃತರಾದರು. ಮೂತ್ರ ಸೋಂಕಿನ ಜೊತೆಗೆ ಕಾಡಿದ ಚಿಕೂನ್ ಗುನ್ಯ ರೋಗವು ಅವರನ್ನು ನಮ್ಮಿಂದ ದೂರಕ್ಕೆ ಸೆಳೆದೊಯ್ದಿತು.

ಈ ಮಾರಕ ಚಿಕೂನ್ ಗುನ್ಯ ರೋಗವು ಕಾಡಿರುವುದು ಒಬ್ಬಿಬ್ಬರನ್ನಲ್ಲ. ವ್ಯಾಸ ಅವರಂತೆಯೇ ಒಟ್ಟು ೭೨ ಜನರನ್ನು ಅದು ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಬಲಿ ತೆಗೆದುಕೊಂಡಿದೆ. ನಾಲ್ಕು ಲಕ್ಷಕ್ಕೂ ಹೆಚ್ಚಿನ ಮಂದಿ ಈ ರೋಗಕ್ಕೆ ತುತ್ತಾಗಿ ನರಳುತ್ತಿದ್ದಾರೆ. ಇದು ಅತಿರಂಜಿತ ಅಲ್ಲ, ಸತ್ಯ ಎಂದು ಕರ್ನಾಟಕದ ಗ್ರಾಮೀಣಾಭಿವೃದ್ಧಿ ಸಚಿವೆ ಶೋಭಾ ಕರಂದ್ಲಾಜೆ ಇತ್ತೀಚೆಗೆ ಒಪ್ಪಿಕೊಂಡಿದ್ದಾರೆ.

ಈ ಎರಡು ಜಿಲ್ಲೆಗಳಲ್ಲಿ ನೀವು ಯಾರ ಮನೆಗಾದರೂ ಹೋಗಿ, ಚಿಕೂನ್ ಗುನ್ಯದಿಂದ ನರಳುತ್ತಿರುವ ಒಂದಿಬ್ಬರು ರೋಗಿಗಳನ್ನು ಕಂಡೇ ಕಾಣುತ್ತೀರಿ. ಚಿಕೂನ್ ಗುನ್ಯ ರೋಗದ ಪರಿಣಾಮವಾಗಿ ಕೃಷಿ ಕ್ಷೇತ್ರಕ್ಕೆ ಅತಿಯಾದ ಧಕ್ಕೆ ಉಂಟಾಗಿದೆ. ವ್ಯವಸಾಯಕ್ಕಾಗಲೀ, ತೋಟದ ಕೆಲಸಗಳಿಗಾಗಲೀ ಎಲ್ಲೂ ಕೂಲಿ ಕಾರ್ಮಿಕರೇ ಸಿಗುತ್ತಿಲ್ಲ. ಈ ಪ್ರದೇಶದ ಬಹುತೇಕ ವೈದ್ಯರು ಹಗಲೂ ರಾತ್ರಿ ರೋಗಿಗಳಿಗೆ ಚಿಕಿತ್ಸೆ ನೀಡುವ ಕಾಯಕದಲ್ಲಿ ನಿರತರಾಗಿದ್ದಾರೆ.

ಮಳೆ ಬಂದರೆ ಚಿಕೂನ್ ಗುನ್ಯ ಕಾಟ ತಗ್ಗಬಹುದು ಎಂದು ಮೊದಲಿಗೆ ನಂಬಲಾಗಿತ್ತು. ಮಳೆಯ ನೀರು ಸೊಳ್ಳೆಗಳನ್ನು, ಅವುಗಳ ಮೊಟ್ಟೆಗಳನ್ನು ಕೊಚ್ಚಿಕೊಂಡು ಹೋಗಬಹುದು, ಸೊಳ್ಳೆಗಳು ನಿಯಂತ್ರಣಕ್ಕೆ ಬಂದರೆ ರೋಗ ತಗ್ಗಬಹುದು ಎಂಬುದು ನಂಬಿಕೆಯಾಗಿತ್ತು. ಆದರೆ ಈಗಿನ ಅನುಭವವೇ ಬೇರೆ. ಜಡಿ ಮಳೆ ಸುರಿದ ಬಳಿಕವೂ ರೋಗ ಕಮ್ಮಿಯಾಗುತ್ತಲೂ ಇಲ್ಲ, ನಿಯಂತ್ರಣಕ್ಕೆ ಬರುತ್ತಲೂ ಇಲ್ಲ. ಎರಡೂ ಜಿಲ್ಲೆಗಳಲ್ಲಿ ಹೊಸದಾಗಿ ರೋಗಕ್ಕೆ ತುತ್ತಾದ ಪ್ರಕರಣಗಳು ಪ್ರತಿ ದಿನವೂ ವರದಿಯಾಗುತ್ತಿವೆ.

ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ರೋಗಕ್ಕೆ ತುತ್ತಾಗಿ ಅತ್ಯಂತ ಹೆಚ್ಚು ನಲುಗಿರುವುದು ಸುಳ್ಯ, ಪುತ್ತೂರು, ವಿಟ್ಲ ಮತ್ತು ಕಾಸರಗೋಡು. ಈ ಪ್ರದೇಶಗಳಲ್ಲಿ ಜನಜೀವನ ಸಂಪೂರ್ಣ ಹದಗೆಟ್ಟಿದೆ. ನಿಯಂತ್ರಣ ಕ್ರಮಗಳ ಅಭಾವ, ಔಷಧಗಳ ಕೊರತೆ ಪರಿಸ್ಥಿತಿಯನ್ನು ಇನ್ನಷ್ಟು ಚಿಂತಾಜನಕವನ್ನಾಗಿಸಿದೆ.

ಚಿಕೂನ್ ಗುನ್ಯಕ್ಕೆ ನಿರ್ದಿಷ್ಟ ಔಷಧ ಇಲ್ಲದೇ ಇರುವುದರಿಂದ ಹಲವಾರು ಬಗೆಯ ಔಷಧಿಗಳನ್ನು ನೀಡಿ ರೋಗ ನಿಯಂತ್ರಿಸಲು ಯತ್ನಿಸಲಾಗುತ್ತಿದೆ. ಆಯುರ್ವೇದದಲ್ಲಿ ಭಾರತೀಯ ಗೋವುಗಳ ಮೂತ್ರ, ಘೃತ (ತುಪ್ಪ) ಆಧಾರಿತ ಔಷಧಗಳು ಉತ್ತಮ ಫಲಿತಾಂಶ ನೀಡುತ್ತಿವೆ. ಹೀಗಾಗಿ ಶ್ರೀ ರಾಮಚಂದ್ರಾಪುರ ಮಠದ ಶ್ರೀ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ಅವರು ಕಾಸರಗೋಡಿನ ಪೆರ್ಲದಲ್ಲಿರುವ ಬಜಕೂಡ್ಲುವಿನ ಅಮೃತಧಾರಾ ಗೋಶಾಲೆಗೆ ಗೋವು ಆಧಾರಿತ ಪಂಚಗವ್ಯ ಔಷಧಗಳನ್ನು ಚಿಕೂನ್ ಗುನ್ಯ ಚಿಕಿತ್ಸೆಗಾಗಿ ಡಾ. ಗಿರಿಧರ ಕಜೆ, ಬೆಂಗಳೂರು, ಡಾ. ಜಯಗೋವಿಂದ ಉಕ್ಕಿನಡ್ಕ ಅವರಂತಹ ಖ್ಯಾತ ಆಯುರ್ವೇದ ವೈದ್ಯರ ಮಾರ್ಗದರ್ಶನದಲ್ಲಿ ತಯಾರಿಸಿ ವಿತರಿಸುವಂತೆ ನಿರ್ದೇಶನ ನೀಡಿದ್ದಾರೆ.

ಚಿಕೂನ್ ಗುನ್ಯ ರೋಗ ನಿಯಂತ್ರಣಕ್ಕೆ ಪರಿಣಾಮಕಾರಿಯಾಗಿರುವ ಕೆಲವು ಗೋವು ಆಧಾರಿತ ಔಷಧಗಳು ಇವು: ೧) ಗೋವಾಮೃತ – ಆಂಟಿ ಪೈರೆಟಿಕ್, ೨) ಭೂಮಿಕಾ– ಆಂಟಿ ವೈರಲ್, ೩) ಗುನ್ಯ ನಾಶಕ– ಆಂಟಿ ಇನ್‌ಫ್ಲಮೇಟರಿ, ೪) ಗೋಸಾರ ವಟಿ– ಆಂಟಿ ಇನ್‌ಫೆಕ್ಟಿವ್, ಇಮ್ಯುನೋ ಸ್ಟಿಮ್ಯುಲೆಂಟ್, ೫) ಶಮನ ತೈಲ– ಆಂಟಿ ಇನ್‌ಫ್ಲಮೇಟರಿ ಆಯಿಂಟ್‌ಮೆಂಟ್.

ಬಿಎಎಂಎಸ್ ವೈದ್ಯರ ಸಹಯೋಗದೊಂದಿಗೆ ವಿವಿಧ ಚಿಕೂನ್ ಗುನ್ಯ ಪೀಡಿತ ಪ್ರದೇಶಗಳಲ್ಲಿ ಚಿಕಿತ್ಸಾ ಶಿಬಿರಗಳನ್ನು ನಿಗದಿ ಪಡಿಸಲಾಗಿದೆ. ಪೆರ್ಲ, ಕಾಸರಗೋಡಿನಲ್ಲಿ ಜೂನ್ ೨೨ರಂದು ಮೊದಲ ಕ್ಯಾಂಪ್ ನಡೆಸಲಾಯಿತು. ಪಂಚಗವ್ಯ ಔಷಧಗಳನ್ನು ಉಚಿತವಾಗಿ ವಿತರಿಸಲಾಯಿತು. ಸುಮಾರು ೩೦೦ ಮಂದಿ ರೋಗಿಗಳು ಶಿಬಿರದ ಉಪಯೋಗ ಪಡೆದರು. ೫೦೦ ರೋಗಿಗಳ ಒಂದು ಶಿಬಿರದಲ್ಲಿ ವಿತರಣೆಗೆ ಅಂದಾಜು ೧೫,೦೦೦ ರೂಪಾಯಿ ಮೌಲ್ಯದ ಔಷಧ ಬೇಕಾಗುತ್ತದೆ. ವ್ಯಾಪಕ ಪ್ರಮಾಣದಲ್ಲಿ ಈ ಔಷಧ ತಯಾರಿಸಲು ದೊಡ್ಡ ಮೊತ್ತದ ಹಣ ಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ ರಾಮಚಂದ್ರಾಪುರ ಮಠದ ಕಾಮದುಘಾ ಯೋಜನೆಯ ಉಸ್ತುವಾರಿ ನೋಡಿಕೊಳ್ಳುತ್ತಿರುವ ಡಾ. ವೈ.ವಿ. ಕೃಷ್ಣಮೂರ್ತಿ (೯೪೪೮೯೫೫೨೦೬) ಅವರು ಈ ಉದಾತ್ತ ಕಾರ್ಯಕ್ಕೆ ಉದಾರವಾಗಿ ದೇಣಿಗೆ ನೀಡುವಂತೆ ಎಲ್ಲ ಜನರಿಗೆ ಮನವಿ ಮಾಡಿದ್ದಾರೆ. ಈ ದೇಣಿಗೆಗಳನ್ನು 'ಕಾಮದುಘಾ' ಹೆಸರಿನಲ್ಲಿ ನೀಡಬಹುದಾಗಿದ್ದು ಇದಕ್ಕೆ ಆದಾಯ ತೆರಿಗೆ ಕಾಯ್ದೆಯ ೮೦ ಜಿ ನಿಯಮದ ಅಡಿಯಲ್ಲಿ ತೆರಿಗೆ ವಿನಾಯ್ತಿ ಲಭಿಸುತ್ತದೆ. ನೆರವು ನೀಡುತ್ತೀರಿ ತಾನೆ?

– **ನೆತ್ರಕೆರೆ ಉದಯಶಂಕರ**

ಮಾಸದ ಗೋವು

# ಒಂಗೋಲ್

ಒಂಗೋಲ್ ಭಾರತದ ಬಹಳಷ್ಟು ತಳಿಗಳಂತೆ ತನ್ನ ತವರಿನ ಹೆಸರಿನಿಂದ ಗುರುತಿಸಲ್ಪಡುವ ಒಂದು ಉತ್ಕೃಷ್ಟ ತಳಿ. ಆಂಧ್ರದ ಒಂಗೋಲ್ ಪ್ರದೇಶದ ಈ ತಳಿ ನೆಲ್ಲೂರ್ ತಳಿ ಅಂತಲೂ ಕರೆಯಲ್ಪಡಲು ಕಾರಣ ಒಂಗೋಲ್ ತಾಲೂಕು ಮೊದಲು ನೆಲ್ಲೂರ್ ಜಿಲ್ಲೆಯಲ್ಲಿತ್ತು ಎಂಬುದು.

ಇದು ಉತ್ತರದ ಭಗ್ನಾರಿ ತಳಿಯ ಮಿಶ್ರತಳಿ ಅಂತಲೂ, ಆರ್ಯರು ದಕ್ಷಿಣಕ್ಕೆ ಬರುವಾಗ ಕರೆತಂದರು ಅಂತ ಹೇಳುತ್ತರಾದರೂ ಸರಿಯಾದ ಆಧಾರವಿಲ್ಲ. ಕೃಷ್ಣಾ ನದಿಪ್ರದೇಶ, ಪೆನ್ನಾರ್ ನದಿಯ ಆಸುಪಾಸು, ನೆಲಮಲೈ ಅರಣ್ಯ ಇತ್ಯಾದಿಗಳು ಒಂಗೋಲ್‌ನ ಮೂಲಪ್ರದೇಶಗಳು.

ಈ ಪ್ರದೇಷಗಳಲ್ಲಿ ವಸಾಹತುಶಾಹಿ ಕಾಲಿಕ್ಕುವುದಕ್ಕೂ ಮುನ್ನ ವಿಭಿನ್ನ ಸಂಪ್ರದಾಯವೊಂದನ್ನು ತಳಿಸಂಕರ ತಡೆಯಲೋಸುಗ ಆಚರಿಸಲಾಗುತ್ತಿತ್ತಂತೆ. ಹಳ್ಳಿಯ ಶ್ರೀಮಂತನ, ಅಥವ ಗೌಡನ ಪ್ರಾಯೋಜಕತ್ವದಲ್ಲಿ ತಳಿಗೂ ಒಂದೊಂದರಂತೆ ಹೋರಿಗಳನ್ನು ಬೀಜದ ಹೋರಿಯನ್ನಗಿ ದೊಡ್ಡ ಸಮರಂಭವೊಂದರಲ್ಲಿ ಘೋಷಿಸಲಾಗುತ್ತಿತ್ತಂತೆ. ಅಲ್ಲಿ ಅದಕ್ಕೆ ಶಂಖ, ಚಕ್ರ ಅಥವಾ ತ್ರಿಶೂಲವೊಂದನ್ನು ಸಾಂಕೇತಿಕವಾಗಿ ನೀಡುವುದರೊಂದಿಗೆ ಆ ಹೋರಿ ಊರಿನ ಎಲ್ಲ ಹಸುಗಳ ಪತಿಯಾಗಿ ಪರಿಣಮಿಸುತ್ತಿತ್ತು. ಊರಿನ ಹಸುಗಳು ಬೇರೆ ಹೋರಿಯ ಸಂಗ ಮಾಡದಂತೆ ನೋಡಿಕೊಳ್ಳುವುದು ಆ ಹಸುವಿನ ಯಜಮಾನನ ಜವಾಬ್ದಾರಿ. ಈ ಪರಿಯ ಕಾಳಜಿಗೆ ಕಾರಣ ಒಂಗೋಲ್‌ನಂತಹ ತಳಿಯೊದನ್ನು ಎಲ್ಲಿ ಕಳಕೊಂಡೇವೋ ಎಂಬ ಆಗಿನವರ ಕಾಳಜಿ. ಆದರೆ ನಂತರ ಬಂದ ಕ್ಷೀರಕ್ರಾಂತಿ ಈ ಪದ್ಧತಿಗೆ ತಿಲಾಂಜಲಿ ಇಡುವಂತೆ ಮಾಡಿ ಹಣದಾಸೆಗೆ 'ಕೃತಕ ಗರ್ಭಧಾರಣೆ'ಯನ್ನು ಪ್ರೋತ್ಸಾಹಿಸಿ, ಒಂಗೋಲ್‌ನ ತಳಿ ಶುದ್ಧತೆಗೆ ಮಾರಕವಾಗುವಂತೆ ಮಾಡಿತು.



ಓಂಗೋಲ್, ಆಂಧ್ರಪ್ರದೇಶ

ಒಂಗೋಲ್‌ಗಳು ಸಾಮಾನ್ಯವಾಗಿ ದೊಡ್ಡಗಾತ್ರದವುಗಳು. ಹೆಚ್ಚಾಗಿ ಬಿಳಿ ಬಣ್ಣ. ಅವುಗಳ ದೇಹ ಚಹರೆ ಉದ್ದ ದೇಹ, ಚಿಕ್ಕ ಕುತ್ತಿಗೆ, ಉದ್ದ ನೀಳ ಕಾಲುಗಳು, ಕಣ್ಣುಗಳ ಮಧ್ಯೆ ಅಗಲವಾದಂತಿರುವ ಮುಂಚಾಚಿದ ಹಣೆ, ಕಪ್ಪು ಅಂಡಾಕೃತಿಯ ಕಣ್ಣುಗಳು, ಅವುಗಳ ಸುತ್ತ ಅರ್ಧ ಅಂಗುಲದವರೆಗೂ ವ್ಯಾಪಿಸಿದ ಕಡುಗಪ್ಪು ವರ್ತುಲ, ದಪ್ಪನೆಯ ಗಿಡ್ಡ ಕೋಡು, ಅವುಗಳಿಗೆ ಮುತ್ತಿಕ್ಕುವಂತೆ ಉದ್ದ ಕಿವಿ ಇತ್ಯಾದಿ. ಆದರೆ ಇವೆಲ್ಲವುಗಳಿಗಿಂತ ಒಂಗೋಲ್‌ಅನ್ನು ಉಳಿದ ತಳಿಗಳಿಗಿಂತ ಭಿನ್ನವಾಗಿಸಿರುವುದು, ಅದಕ್ಕೊಂದು ರಾಜಗಾಂಭೀರ್ಯ ತಂದುಕೊಟ್ಟಿರುವುದು ಬೆನ್ನಿನ ಮೇಲಿನ ಡುಬ್ಬ.



provided by Dr.A.Madhusudhna Rao

ಒಂಗೋಲ್‌ಗಳು ಉಭಯತಳಿಗಳು. ಹೋರಿಗಳು ಬಲಶಾಲಿಗಳಾಗಿದ್ದು ಉಳುಮೆಗೆ ಬಹು ಉಪಯುಕ್ತವೆನಿಸಿದರೆ, ಹಸುಗಳು ಉತ್ತಮ ಹಾಲಿನತಳಿಗಳಾಗಿ ಗುರುತಿಸಲ್ಪಡುತ್ತವೆ. ಒಂಗೋಲ್‌ಗಳು ಮೂಲದಲ್ಲಿ ಹಾಲಿನ ತಳಿಗಳೆ. ಒಂಗೋಲ್‌ನ ತವರು ಪ್ರದೇಶದಲ್ಲಿ ಆರ್ಥಿಕವಾಗಿ ನೆಚ್ಚಿಕೊಳ್ಳಬಲ್ಲ ಬೆಳೆಗಳಿಲ್ಲದ ಕಾರಣ, ರೈತರಿಗೆ ಹೈನುಗಾರಿಕೆಯತ್ತ ಒಲಿಯುವಂತಾಗಿ ಉತ್ತಮ ಹಾಲಿನ ತಳಿಯ ಅನ್ವೇಷಣೆಯಲ್ಲಿ ದೊರಕಿದ್ದು ಒಂಗೋಲ್. ಕಾಲಾನಂತರ ನಿಧಾನವಾಗಿ ಇದು ಉಭಯತಳಿಯಾಗಿ ಬದಲಾಯಿತು ಅನ್ನುತ್ತರೆ ತಜ್ಞರು.

ಒಂಗೋಲ್‌ನ ಪ್ರಮುಖ ವಿಶೇಷತೆ ಅದರ ಚರ್ಮ. ಅದರ ಮೆಲ್ಮೈ ಚರ್ಮ ಸೂರ್ಯನ ಬೆಳಕಿನ ಉಷ್ಣವನ್ನು ಶೇಕಡ ಲಕ್ಷರಷ್ಟನ್ನು ಹೊರಹಾಕಿದರೆ ಒಳಗಿರುವ ಕಪ್ಪುಚರ್ಮದ ಪದರುಗಳು ತಾಪಮಾನವನ್ನು ಇನ್ನಷ್ಟು ಕುಗ್ಗಿಸುವಂತೆ ಮಾಡುತ್ತವೆ.

ಹಾಗಾಗಿ ಒಂಗೋಲ್ ಅಕ್ಷರಶಃ 'thermostat'!

**-ಮಧುಕೇಶ ದೊಡ್ಡೇರಿ**

# ಗೋವು ಮತ್ತು ಕೃಷಿ

**ಶ್ರೀ ಸುಭಾಷ್ ಪಾಳೇಕರರ 'ಶೂನ್ಯ ಬಂಡವಾಳದ ಲಾಭದಾಯಕ ನೈಸರ್ಗಿಕ ಕೃಷಿ'ಯ ಪರಿಚಯಾತ್ಮಕ ಪುಸ್ತಿಕೆ**

**– ಪರೀಕ್ಷಿತ ತೋಳ್ಪಾಡಿ ಎಸ್.**

ಕನ್ನಡ ನಾಡಿನ ಎಲ್ಲೆಡೆಯೂ, ಮಕ್ಕಳಿಂದ ಹಿಡಿದು ಮುದುಕರವರೆಗೆ ಎಲ್ಲರ ಬಾಯಲ್ಲೂ ಮಿಡಿಯುವ ಒಂದು ಹಾಡು ಗೋವಿನ ಹಾಡು. ಕಾಳಿಂಗನೆಂಬ ಗೊಲ್ಲನ ಬಳಿ ಇರುವ ನೂರಾರು ಹಸುಗಳಲ್ಲಿ ಪುಣ್ಯಕೋಟಿಯೂ ಒಂದು. ಒಂದು ದಿನ ಎಂದಿನಂತೆ ಹಾಲು ಕರೆದಾಗಿ ಹುಲ್ಲು ಮೇಯಲು ದಟ್ಟಡವಿಗೆ ತೆರಳಿದ ದನಗಳ ಹಿಂಡು ಹಿಂದಿರುಗುತ್ತಿರುವಾಗ ಚಂಡ ವ್ಯಾಘ್ರವೊಂದು ದನಗಳ ಮಂದೆಯ ಮೇಲೆರಗುತ್ತದೆ. ಅದಕ್ಕೆ ಪುಣ್ಯಕೋಟಿ ಈಡಾಗುತ್ತದೆ. ಪುಣ್ಯಕೋಟಿ ಆ ಹುಲಿಗೆ ನಾನು ನನ್ನ ಕರುವಿಗೆ ಮೊಲೆಯನ್ನು ಕೊಟ್ಟು; ಬುದ್ಧಿ ಮಾತುಗಳನ್ನು ಹೇಳಿ ಖಂಡಿತವಾಗಿ ಮರಳಿ ಬರುವೆ; ಆಮೇಲೆ ನಿನಗೆ ಆಹಾರವಾಗುತ್ತೇನೆ ಎಂದು 'ಮೂರು ಮೂರ್ತಿ'ಗಳ ಮೇಲೆ; 'ಧಾರುಣೀದೇವಿ'ಯ ಮೇಲೆ ಆಣೆಯಿಟ್ಟು ಬೇಡಿಕೊಳ್ಳುತ್ತದೆ. ಹುಲಿ ದನವನ್ನು ಬಿಟ್ಟು ಬಿಡುತ್ತದೆ. ತನ್ನ ಕಂದನಿಗೆ ಎಲ್ಲ ಬುದ್ಧಿವಾದಗಳನ್ನು ಹೇಳಿ, ಉಳಿದ ಹಸುಗಳ ರಕ್ಷೆಯನ್ನು ಕೋರಿ ದನ ಮರಳಿ ಬರುತ್ತದೆ. ಪುಣ್ಯಕೋಟಿಯ 'ಸತ್ಯವಾಕ್ಯಕೆ ತಪ್ಪಿ ನಡೆಯದ' ವರ್ತನೆಯನ್ನು ಕಂಡು ಆಘಾತಕ್ಕೊಳಗಾದ ಹುಲಿ ಆಕಾಶಕ್ಕೆ ನೆಗೆದು ತನ್ನ ಪ್ರಾಣವನ್ನು ಬಿಡುತ್ತದೆ. ಶಿವನು ಆ ಹುಲಿಗೆ ಮೋಕ್ಷವನ್ನಿತ್ತ ಎಂದು ಹೇಳಿ ಆ ಅನಾಮಧೇಯ ಕವಿ ತನ್ನ ಹಾಡನ್ನು ಕೊನೆಗೊಳಿಸುತ್ತಾನೆ.

ಅಚ್ಚರಿ ಎಂದರೆ ಹತ್ತಿರ ಹತ್ತಿರ ೧೧೫ ಚೌಪದಿಗಳ ಈ ನೀಳ್ಗವನವನ್ನು ಓದುವಾಗ ಇದೊಂದು ಪ್ರಾಣಿಗಳ ಕಥೆ ಎಂದು ಅನಿಸುವುದೇ ಇಲ್ಲ. ಕಾರಣವೇನೆಂದರೆ ಇದು ಮನುಷ್ಯರ ಕತೆಯೇ. ಮನುಷ್ಯ ಪ್ರಕೃತಿಯನ್ನು ಅತ್ಯಂತ ಸೂಕ್ಷ್ಮ ರೂಪದಲ್ಲಿ ಅರ್ಥವಿಸಿಕೊಂಡ ಈ ನಮ್ಮ ಕನ್ನಡ ಕವಿ, ಮಾನವನಲ್ಲಿ ಪ್ರಕೃತಿ ಸಹಜವಾಗಿ ಇರುವ ನಾನು, ನನ್ನದು, ನನಗಾಗಿ ಎನ್ನುವ ನಿಮ್ನ ಭಾವವನ್ನು, ಸ್ವಾರ್ಥತೆಯನ್ನು ಮತ್ತು ಬುದ್ಧನಂಥ, ಗಾಂಧಿಯಂಥ ಉನ್ನತ ಭಾವವನ್ನು; ನಿಸ್ವಾರ್ಥತೆಯನ್ನು –ಅದೂ ಪ್ರಕೃತಿ ಸಹಜವೇ –ಮುಖಾಮುಖಿಯಾಗಿಸಿ ಸಾರ್ವಕಾಲಿಕ ಮೌಲ್ಯಗಳಾದ ಸತ್ಯ–ಅಹಿಂಸೆಗಳ ಎತ್ತರ–ಬಿತ್ತರಗಳನ್ನು ಅತ್ಯಂತ ಹೃದ್ಯವಾಗಿ ಚಿತ್ರಿಸುತ್ತಿದ್ದಾನೆ.

ಹುಲಿಗೆ ಬೇಟೆ ಪ್ರಕೃತಿ ಸಹಜ. ಆದರೆ ಸತ್ಯವಚನವನ್ನೇ ಜೀವವಾಗಿ ಉಳ್ಳ ತನ್ನ ಬೇಟೆಯನ್ನು ಹುಲಿ ತಿನ್ನಲಾರದು. ಅಪರಿಹಾರ್ಯವಾಗಿ ಅದು ತನ್ನ ಪ್ರಾಣತ್ಯಾಗವನ್ನು ಮಾಡಿಕೊಳ್ಳುತ್ತದೆ. ಕವಿಯು ಅತ್ಯಂತ ಧ್ವನಿಪೂರ್ಣವಾಗಿ 'ಹರನು ಮೆಚ್ಚಿದ ಹರಿಯು ಮೆಚ್ಚಿದ', 'ಬ್ರಹ್ಮಪ್ರಾಣವ ಕರೆದುಕೊಂಡ', 'ಹುಲಿಗೆ ಮೋಕ್ಷವ ಕೊಟ್ಟ ಶಿವನು' ಎಂದು ವರ್ಣಿಸುತ್ತಾನೆ. 'ಮಿತಿ'ಯು ಪ್ರಾಕೃತಿಕ . ಹುಲಿಯು ಅತ್ಯಂತ ಅನಿರೀಕ್ಷಿತವಾಗಿ ತನ್ನ ವ್ಯಕ್ತಿತ್ವದ ಮಿತಿಯನ್ನು ಎದುರುಗೊಳ್ಳುತ್ತದೆ. ಮರ್ಮಾಘಾತಗೊಳ್ಳುತ್ತದೆ. ಈ ಆಘಾತಕ್ಕೆ ಕಾರಣವೇನೆಂದರೆ ಅದು ತನ್ನ ಮಿತಿಯನ್ನು ಮೀರುವ ಪ್ರಕ್ರಿಯೆ ಆರಂಭಗೊಳ್ಳುತ್ತದೆ.

ಅಂತಿಮವಾಗಿ ಪ್ರಕೃತಿ ಮಿತಿಯನ್ನು ಕತ್ತರಿಸಿ ಮುಕ್ತಿಯನ್ನು ಅನುಗ್ರಹಿಸುತ್ತದೆ. ಇದೂ ಪ್ರಾಕೃತಿಕವೇ. ಹೀಗೆ ಜೀವವೊಂದರ ಹಿಂಸೆಯಿಂದ ಹಿಂಸೆಯ ಕಡೆಗಿನ; ಮಿತಿಯಿಂದ ಮುಕ್ತಿಯ ಕಡೆಗಿನ ಯಾತ್ರೆಯನ್ನು ದನ–ಹುಲಿಗಳ ರೂಪಕದಿಂದ ಅದ್ಭುತವಾಗಿ ಕವನಿಸಿದ ಈ ಅನಾಮಧೇಯ ಜನಪದ ಕವಿಗೆ ಅಂಜಲಿ ಮುದ್ರೆಯೊಂದನ್ನಲ್ಲದೆ ನಾವು ಬೇರೇನನ್ನು ತಾನೇ ಅರ್ಪಿಸಲು ಸಾಧ್ಯ?

ದುರಂತವೆಂದರೆ, ಆಧುನಿಕ ವಿಜ್ಞಾನ ತನ್ನ ಮಿತಿಯನ್ನು ತಾನು ತಿಳಿಯುವಲ್ಲಿ ಸಂಪೂರ್ಣ ವಿಫಲವಾಗಿರುವುದು ಅಥವಾ 'ಮಿತಿ'ಯನ್ನೇ ಅದು ಮಾನ್ಯ ಮಾಡದೆ ಇರುವುದು. ಪ್ರಭುತ್ವದ, ಬಂಡವಾಳ ಶಾಹಿತ್ವದ, ದುರಾಸೆಯ ತಾಳಕ್ಕೆ ಕುಣಿವ ಆಧುನಿಕ ವಿಜ್ಞಾನದ ಅಗಾಧ, ಪ್ರಭಾವೀ ಹೆಜ್ಜೆಗಳು ಪ್ರಕೃತಿ ಸಹಜವಾದ ನಿಮ್ನತೆಯ, ಸ್ವಾರ್ಥತೆಯ ಹೆಜ್ಜೆಗಳಲ್ಲ. ಬದಲಾಗಿ ಅದೊಂದು ಕಬಂಧ ಬಿಗಿತವಾಗಿ, ರಾಕ್ಷಸೀಯ ಕುಣಿತವಾಗಿ ವಿಸ್ತರಿಸಿರುವುದು.

ಅದು ಸೃಷ್ಟಿಸಿದ ಪರಮಾಣು ಬಾಂಬುಗಳನ್ನೇ ನೋಡಿ. ಒಂದೊಂದು ಬಾಂಬೂ ಇಡಿಯ ಭೂಮಂಡಲವನ್ನು ಛಿದ್ರಛಿದ್ರವಾಗಿಸುವಷ್ಟು ಶಕ್ತಿ ಸಂಪನ್ನವಾಗಿದೆ. ಅದರ ಶೋಧನೆಗಳಾದ ರಾಸಾಯನಿಕ ಗೊಬ್ಬರಗಳು – ಕೀಟನಾಶಕಗಳು ಪ್ರಪಂಚದಾದ್ಯಂತ ಉಪಯೋಗಿಸಲ್ಪಟ್ಟು ನೆಲ–ಜಲ–ಅನಿಲ–ಅನ್ನಗಳನ್ನು ವಿಷಾಕ್ತಗೊಳಿಸಿವೆ. ಕೈಗಾರಿಕೆಗಳ ತ್ಯಾಜ್ಯಮಾಲಿನ್ಯಗಳು ರಾಸಾಯನಿಕ ಶಸ್ತ್ರಾಸ್ತ್ರಗಳ ಪರೀಕ್ಷಾ ಸ್ಫೋಟಗಳು–ಪೆಟ್ರೋಲಿಯಂ ಉತ್ಪನ್ನಗಳ ಪ್ರಚಂಡ ದಹನಗಳಿಂದಾಗಿ ವಿಶ್ವದ ಉಷ್ಣತೆಯೇ ಏರುತ್ತಿದೆ!

ಆಧುನಿಕ ವಿಜ್ಞಾನದ ಮಹತ್ಸಾಧನೆಗಳನ್ನು ನಾನು ಕಡೆಗಣಿಸುತ್ತಿಲ್ಲ. ಆದರೆ ಮಾನವನ, ಅಷ್ಟೇಕೆ ಇಡಿಯ ಭೂಮಂಡಲದ ಅಸ್ತಿತ್ವಕ್ಕೆ ಅಪಾಯವನ್ನು ತಂದೊಡ್ಡುವಂತೆ ಬೆಳೆದ ಅದರ ಬೆಳವಣಿಗೆ ಕಂಗೆಡಿಸುವಂಥದು ಅಲ್ಲವೆ?

ಬನ್ನಿ, ಒಮ್ಮೆ ಈ ಎಲ್ಲ ಆಧುನಿಕತೆಯ ಕ್ಷೋಭೆ, ಅಶಾಂತಿ, ಉನ್ಮಾದಗಳಿಂದ ಮುಕ್ತವಾದ ವಿಶ್ವವನ್ನು ಕಲ್ಪಿಸಿಕೊಳ್ಳೋಣ.

ಆಧುನಿಕ ವಿಜ್ಞಾನ ಎಲ್ಲ ಶೋಷಕ ಶಕ್ತಿಗಳ ಹಿಡಿತದಿಂದ ಪಾರಾಗಿ ತನ್ನ ಅಗಾಧ ಬುದ್ಧಿಶಕ್ತಿಯಿಂದ ಮನುಕುಲವನ್ನು ಪ್ರಕೃತಿಗೆ ಪೂರಕವಾಗಿ ಮುನ್ನಡೆಸುತ್ತದೆ ಎಂದು ಆಶಿಸೋಣ.

ಹುಲಿಯ ಪರಿವರ್ತನೆಯ ಬೀಜ ಅದು ಪುಣ್ಯಕೋಟಿಯ 'ಭಾಷೆ' ಯನ್ನು ನಂಬಿದ್ದರಲ್ಲಿತ್ತು. ಅಮಾನುಷ ಆಧುನಿಕತೆಗೆ ಬಲಿಯಾದ ನಮ್ಮೆಲ್ಲರ ಪರಿವರ್ತನೆಯ ಮೂಲವೂ ನಮ್ಮೀ ನೆಲದ ಪುಣ್ಯಕೋಟಿಗಳನ್ನು ನಂಬಿ ನಡೆಯುವುದಲ್ಲಿದೆ ಎಂದೆನಿಸುತ್ತದೆ.

**ಬನ್ನಿ ನೋಡೋಣ ಗೋವನ್ನು ನಂಬಿ ನಡೆದಾಗ ಸಿಗುವ ನೋಟವನ್ನು:**

ಭಾರತೀಯರು ಜಾನುವಾರುಗಳಲ್ಲಿ ಕಂಡು ಕೊಂಡ ಪ್ರಧಾನ ಉಪಯುಕ್ತತೆಗಳಲ್ಲಿ ಒಂದು ಅವುಗಳ ಎಳೆಯುವ ಶಕ್ತಿ. ಈ ಅಂಕಿ ಅಂಶಗಳನ್ನೆ ನೋಡಿ.

೨೦೦೪–೨೦೦೫ರಲ್ಲಿ ಭಾರತೀಯ ರೈಲ್ವೇ ವ್ಯವಸ್ಥೆ ಸಾಗಿಸಿದ ಸರಕು ೫೫೭ ದಶಲಕ್ಷ ಟನ್. ಅದೇ ವೇಳೆ ಭಾರತೀಯ ರೈತಾಪಿ ವರ್ಗ ಎತ್ತಿನ ಗಾಡಿಗಳಲ್ಲಿ ಸಾಗಿಸಿದ ಸರಕು ೨೭೮೫ ದಶಲಕ್ಷ ಟನ್. ಅಂದರೆ ಸರಿ ಸುಮಾರು ಐದು ಪಟ್ಟು ಹೆಚ್ಚು!

೨೦೦೪–೦೫ ರೈಲುಗಳಲ್ಲಿ ಪ್ರಯಾಣಿಸಿದ ಪ್ರಯಾಣಿಕರ ಸಂಖ್ಯೆ ೫೦೧೨ ದಶಲಕ್ಷವಾದರೆ ರಾಸುಗಳು ಹೊತ್ತು ಸಾಗಿಸಿದ ಪ್ರಯಾಣಿಕರ ಸಂಖ್ಯೆ ೨೦,೪೪೦ ದಶಲಕ್ಷ. ಹೀಗೆ ಕಳೆದ ಒಂದು ವರುಷದಲ್ಲಿ ಜಾನುವಾರುಗಳು ತಮ್ಮ ಎಳೆಯುವ ಶಕ್ತಿಯಿಂದ ಉಳಿಸಿದ ಇಂಧನ ಎಷ್ಟು ಗೊತ್ತೇ? ೨ ದಶಲಕ್ಷ ಟನ್ ಗಳಷ್ಟು.

ನಾವೆಲ್ಲ ತಿಳಿದಂತೆ ಭಾರತದ ಶೇಕಡಾ ೭೦ರಷ್ಟು ಜನ ಕೃಷಿಕರು ಮತ್ತು ಇವರಲ್ಲಿ ಶೇಕಡಾ ೯೮ ಜನ ತಮ್ಮೆಲ್ಲ ಕೃಷಿಕಾರ್ಯಗಳಿಗೆ ಅಂದರೆ ಗೊಬ್ಬರ, ಉಳುಮೆ, ಒಕ್ಕಣೆ ಇತ್ಯಾದಿಗಳಿಗೆ ಅವಲಂಬಿಸಿರುವುದು ಈ ಗೋವಂಶವನ್ನೇ.

ಇಂದು ನಾವು, ನೀವು ಉಣ್ಣುವ ಆಹಾರಗಳಿಗೆ ಮೂಲ ಕಾರಣವಾದವುಗಳು ಕೃಷಿಯ ಉತ್ಪನ್ನಗಳಿಂದ ಮಾನವ ಜನಾಂಗವನ್ನು ಪೋಷಿಸಿ, ಅವುಗಳ ಉಳಿಕೆಗಳಿಂದ, ತ್ಯಾಜ್ಯಗಳಿಂದ ತಮ್ಮನ್ನು ತಾವು ಪೋಷಿಸಿಕೊಳ್ಳುತ್ತಾ, ಯಾವುದೇ ರೀತಿಯಲ್ಲಿ ಪರಿಸರವನ್ನು ಹಾಳುಗೆಡವದೆ ಬದಲಾಗಿ ನಿರಂತರವಾಗಿ ಫಲವತ್ತಾಗಿಸುತ್ತ ಬಂದಿರುವ ಈ ಜಾನುವಾರುಗಳು.

ಗೋಮೂತ್ರವೊಂದು ಅತಿ ಶ್ರೇಷ್ಠೌಷಧೀಯ ಗುಣಗಳಿಂದ ಕೂಡಿದ ಅಮೃತ ಸಮಾನ ವಸ್ತು. ಇದೊಂದು ಉತ್ಕೃಷ್ಟ ಕೀಟನಾಶಕವೂ ಹೌದು. ಗೋಮೂತ್ರದ ಸರಿಯಾದ ಬಳಕೆಅನೇಕ ಜೀವ ರಕ್ಷಕ ಔಷಧಿಗಳಿಗೆ –ಕೀಟ ನಿಯಂತ್ರಕ_ ಫಲ ಸಂರಕ್ಷಕಗಳಿಗೆ ಕಾರಣವಾದರೆ ಅದರಿಂದಾಗುವ ಉಳಿತಾಯ ಊಹೆಗೂ ನಿಲುಕದಷ್ಟು.

ಸೆಗಣಿಯಿಂದ ವಿದ್ಯುತ್ ಮತ್ತು ಇಂದನವನ್ನು ಪಡೆಯುವಲ್ಲಿ ನಡೆಯುತ್ತಿರುವ ಸಂಶೋಧನೆಗಳು ಭಾರತದ ಭವಿಷ್ಯದ ಇಂಧನ ಮತ್ತು ಶಕ್ತಿಯ ಕೊರತೆಯನ್ನು ಪೂರೈಸುವಲ್ಲಿ ಗೋವಂಶ ಒಂದು ಮಹಾನ್ ಕೊಡುಗೆಯಾಗಲಿದೆ ಎಂದು ಹೇಳುತ್ತಿವೆ. ಸೆಗಣಿಯ ಪರಮಾಣು ವಿಕಿರಣ ನಿರೋಧಕ ಗುಣ ಒಂದು ಹೊಸ ಆಯಾಮವನ್ನೇ ತೋರಿಸಿದೆ. ಪಂಚಗವ್ಯಗಳಾದ ಹಾಲು, ಮೊಸರು, ಬೆಣ್ಣೆ, ತುಪ್ಪ, ಮಜ್ಜಿಗೆಗಳ ಬಗ್ಗೆ ಹೇಳುವುದೇನಿದೆ? ಒಂದೇ ಮಾತಿನ ಲ್ಲಿ ಹೇಳುವುದಾದರೆ ಗೋವು ಮಾನವನ ಎರಡನೇ ತಾಯಿ!

ಪ್ರಕೃತಿಯ ಸೂಕ್ಷ್ಮ ಒಂದಿನಿತೂ ಭಂಗವುಂಟಾಗದಂತೆ ಮಾನವ ಅವನೆಲ್ಲ ಸುಖ ಸೌಲಭ್ಯಗಳನ್ನು ಪಡೆಯುವಲ್ಲಿ ತಡೆಯದೆ ತನ್ನದೆಲ್ಲವನ್ನೂ ನೀಡಬಲ್ಲ ಗೋವಿನ ದಯೆಗೆ ಪ್ರತಿಯಾಗಿ ನಾವು ನೀಡುತ್ತಿರುವುದೇನನ್ನು ?

ನಮ್ಮದೇ ದೇಶದ ಪ್ರಚಂಡ ವೈವಿಧ್ಯಗಳಿಗೆ ಸ್ಪಂದಿಸಿ ರೂಪಿತವಾದ ಅದ್ಭುತ ವೈವಿಧ್ಯಮಯ ಗೋವಂಶವನ್ನು ತಿರಸ್ಕರಿಸಿ ವಿದೇಶೀ ತಳಿಗಳಿಗೆ ಅಗ್ರಪೂಜೆಯನ್ನು ಸಲ್ಲಿಸುತ್ತಿದ್ದೇವೆ.

ದೇಶದ ಅರ್ಥ ವ್ಯವಸ್ಥೆಗೆ ಹೊಸ ಜೀವವನ್ನು ತುಂಬಬಲ್ಲ ಎತ್ತಿನಗಾಡಿಗಳನ್ನು ಆಧುನಿಕ ತಂತ್ರಜ್ಞಾನವನ್ನು ಬಳಸಿ ಸುಧಾರಿಸುವ ಯಾವುದೇ ಯತ್ನವನ್ನು ಮಾಡದೆ ಚಂದ್ರನಿಂದ ತಂದ ಕಲ್ಲಿನ ಅಧ್ಯಯನದಲ್ಲಿ, ಹೊಸ ಹೊಸ ಮಾದರಿಯ ವಾಹನಗಳನ್ನು ತಯಾರಿಸುವಲ್ಲಿ ಪೂರ್ಣ ಮಗ್ನತೆಯನ್ನು ತೋರಿಸುತ್ತಿದ್ದೇವೆ.

ಇಷ್ಟು ಸಾಲದೆಂಬಂತೆ ದೇಶದಾದ್ಯಂತ ೩೬,೦೦೦ಕ್ಕೂ ಹೆಚ್ಚು ಕಸಾಯಿಖಾನೆಗಳನ್ನು ನಿರ್ಮಿಸಿ ದಿನವೊಂದಕ್ಕೆ ೧೦,೦೦೦ಕ್ಕೂ ಹೆಚ್ಚು ರಾಸುಗಳನ್ನು ಕೊಲ್ಲುವ ಪುಣ್ಯಕಾರ್ಯವನ್ನು ಕೂಡ ಮಾಡುತ್ತಿದ್ದೇವೆ!

ಆದರೆ ಈ ತುರುಗಳು ಮಾತ್ರ ತಮ್ಮ ಕಂದಮ್ಮಗಳನ್ನು ಮುದ್ದಿಸಿ ಆಧುನಿಕತೆಯೆಂಬ ಚಂಡವ್ಯಾಘ್ರನಲ್ಲಿಗೆ ಮರಳಿ ಬರುತ್ತಿವೆ ಮೌನವಾಗಿ. ಈ ಹುಲಿಗೆ ಕನಿಷ್ಠ ನಾಚುಗೆಯೂ ಆಗುತ್ತಿಲ್ಲ. ಏಕೆಂದರೆ ಇದು ಪ್ರಕೃತಿ ಸಹಜವಾಗಿಲ್ಲ. ಈ ಹುಲಿ ತೀರ ಅನೈಸರ್ಗಿಕ –ಕೃತ್ರಿಮ–ಸ್ವಯಂ ವಿನಾಶಕ.

ಪ್ರಭುದೇವನ ಮಾರ್ಮಿಕ ವಚನವೊಂದು ನೆನಪಾಗುತ್ತಿದೆ.

ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದ
ಬಯಸುವವ
ವೀರನೂ ಅಲ್ಲ, ಧೀರನೂ ಅಲ್ಲ.
ಪ್ರಕೃತಿ ಕೊಟ್ಟ ಕುದುರೆ ನಮ್ಮೀ ನೆಲದ ಗೋವು.
ಪ್ರಕೃತಿ ಕೊಟ್ಟ ಚದುರೆ ನಮ್ಮೀ ನೆಲದ ಆವು.

ಇಡಿಯ ಭಾರತದ ಕೃಷಿ– ಪಾರಿಸರಿಕ ಲೋಕ ಒಂದು ವಿಪನ್ನಾವಸ್ಥೆಯಲ್ಲಿದೆ ಎನ್ನುವುದು ಎಲ್ಲರಿಗೂ –ಎಲ್ಲ ಪ್ರಜ್ಞಾವಂತರಿಗೂ ತಿಳಿದ ವಿಚಾರ. ಕೃಷಿಕರ ಆತ್ಮಹತ್ಯೆಗಳು ಒಂದು ಸರ್ವ ಸಾಮಾನ್ಯ ಸಂಗತಿಯಂತಾಗಿರುವುದು, ಒಂದು ಪ್ರದೇಶದ ದೊಡ್ಡ ಜನಸಮುದಾಯವನ್ನೇ ಅಲ್ಲಿನ ಎಲ್ಲ ಜೀವ ವೈವಿಧ್ಯಗಳನ್ನು ನಾಶ ಮಾಡಿ ಸ್ಥಳಾಂತರಿಸುವುದು ಮುಂತಾದ ಘಟನೆಗಳೇ ಪರಿಸ್ಥಿತಿ ಯಾವ ಅಂಚಿನಲ್ಲಿದೆ ಎನ್ನುವುದನ್ನು ಸೂಚಿಸುತ್ತದೆ. ಕೃಷಿ ಲೋಕವೊಂದರತ್ತ ಗಮನಹರಿಸಿದರೂ ಭೂಮಿಯ ಫಲವತ್ತತೆಗೇ ಮಾರಕವಾದ ರಾಸಾಯನಿಕ ಗೊಬ್ಬರಗಳನ್ನು, ಉಗ್ರ ವಿಷಯುಕ್ತ ಕೀಟನಾಶಕಗಳನ್ನು, ರಾಕ್ಷಸ ಟ್ರಾಕ್ಟರ್‌ಗಳನ್ನು ಬಳಸಿ ಬೆಳೆ ತೆಗೆಯುವ ಆಧುನಿಕ ಕೃಷಿ ಪದ್ಧತಿ ಮಣ್ಣು–ನೀರು_ವಾತಾವರಣಗಳನ್ನು ವಿಷಯುಕ್ತಗೊಳಿಸಿ, ಬೆಳೆಸಲ್ಪಟ್ಟ ಬೆಳೆಯನ್ನೂ ವಿಷಮಯವನ್ನಾಗಿ ಮಾಡಿ ಅಂತಿಮವಾಗಿ ಆತ್ಮಹತ್ಯೆಯಂಥ ಮನೋಮಾಲಿನ್ಯದ ಪರಾಕಾಷ್ಠೆಗೆ ರೈತನನ್ನು ಒಯ್ಯುತ್ತಿರುವುದು ವಾಸ್ತವಿಕ ಸತ್ಯವಾಗಿದೆ.

(ಮುಂದುವರೆಯುವುದು)

(ಕೃಪೆ: ಧರ್ಮಭಾರತೀ)